RNU AIR DHARWAD

OCTOBER 17, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- 12 ಲಕ್ಷದ 82 ಸಾವಿರ ಹೆಕ್ಟರ್ ಬೆಳೆ, ಅತಿ ವೃಷ್ಟಿ ಹಾಗೂ ನೆರೆಯಿಂದ, ಹಾನಿ; ರಾಜ್ಯದಿಂದ, ರೈತರಿಗೆ ಹೆಚ್ಚುವರಿ ಪರಿಹಾರ.
- ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ, 'ಥ್ರೀ ಪಿ' ಮಾದರಿಯಲ್ಲಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಕೇಂದ್ರದಿಂದ, ಕ್ರಮ.
- ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ; 'ಸ್ಟೆಪ್' ಹಾಗೂ 'ಬೈಕ್ಯಾಕ್' ಮಾಹಿತಿ, ಕಾರ್ಯಾಗಾರ.
- ಕೊಡಗಿನ ಬ್ರಹ್ಮಗಿರಿಯ, ತಲ ಕಾವೇರಿಯಲ್ಲಿ ಇಂದು, ತೀರ್ಥೋದ್ಭವ.

<><><>

ಈಗ ವಾರ್ತೆಗಳ ವಿವರ

<><><>

ಮಳೆ ಹಾಗೂ ನೆರೆಯಿಂದ ಹಾನಿಗೀಡಾದ, 12 ಲಕ್ಷದ 82 ಸಾವಿರ ಹೆಕ್ಟರ್ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ, ಹೆಚ್ಚಿನ ಪರಿಹಾರ ನೀಡಲು, ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಬಳಿಕ ಮಾಹಿತಿ ನೀಡಿದ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ, ರಾಜ್ಯ ಹಾಗೂ ರಾಷ್ಟ್ರೀಯ, ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿ,

<><><>

ಮಳೆಯಾಶ್ರಿತ ಪ್ರತಿ ಹೆಕ್ಟರ್ ಬೆಳೆ ಹಾನಿಗೆ, 17 ಸಾವಿರ ರೂಪಾಯಿ, ನೀರಾವರಿ ಪ್ರತಿ ಹೆಕ್ಟರ್‌ಗೆ, 25 ಸಾವಿರದ 500 ರೂಪಾಯಿ, ಹಾಗೂ ಬಹು ವಾರ್ಷಿಕ ಬೆಳೆಗೆ, ಪ್ರತಿ ಹೆಕ್ಟರ್‌ಗೆ ಒಟ್ಟು 31 ಸಾವಿರ ರೂಪಾಯಿ ಪರಿಹಾರ ನೀಡಲು, ಸಚಿವ ಸಂಪುಟ ಅನುಮೋದಿಸಿದೆ..

<><><>

ಕಲಬುರಗಿ ಹಾಗೂ ಮೈಸೂರಿನಲ್ಲಿ, ನೂರು ಕೋಟಿ ರೂಪಾಯಿ ಅನುದಾನದಲ್ಲಿ, 'ನಿಮ್ಹಾನ್ಸ್ ಮಾದರಿ' ಸಂಸ್ಥೆ ಪ್ರಾರಂಭಿಸಲು, ಆಡಳಿತಾತ್ಮಕ ಅನುಮೋದನೆ ಹಾಗೂ..

<><><>

ವಿಜಯಪುರದ 100 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಜಿಲ್ಲಾ ಆಸ್ಪತ್ರೆಗೆ, 54 ಕೋಟಿ 92 ಲಕ್ಷ ರೂಪಾಯಿ ವೆಚ್ಚದಲ್ಲಿ, ಅಗತ್ಯ ವೈದ್ಯಕೀಯ ಉಪಕರಣ ಖರೀದಿಸಲು, ಸಂಪುಟ ಒಪ್ಪಿಗೆ ನೀಡಿದೆ, ಎಂದರು.

<><><>

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಯೋಗ್ಯ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು, 'ಥ್ರೀ ಪಿ' ಮಾದರಿಯಲ್ಲಿ, ಕ್ರಮ ಕೈಗೊಳ್ಳಲಾಗಿದೆ ಎಂದು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ರಾಯಚೂರು ಜಿಲ್ಲೆ, ಸಿಂಧನೂರು ತಾಲೂಕು, ಜವಳಗೇರಾ ಗ್ರಾಮದಲ್ಲಿ ತೊಗರಿ ಹಾಗೂ ಕಡಲೆ ಬೆಳೆಗಳ ಸಂಸ್ಕರಣಾ ಕೇಂದ್ರ ಹಾಗೂ ರೈತ ತರಬೇತಿ ಕೇಂದ್ರ ಮತ್ತು ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲೂಕು, ಕೊಂಚಿಗೇರಿ ಗ್ರಾಮದಲ್ಲಿ, ಖಾರದ ಪುಡಿ ಮತ್ತು ಪ್ಲೇಕ್ಸ್‌ನ ಸಂಸ್ಕರಣೆಗಾಗಿ ಸಾಮಾನ್ಯ ಸೌಲಭ್ಯ ಕೇಂದ್ರ ಉದ್ಘಾಟಿಸಿದರು.

ಒಟ್ಟು ಮೂರೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ, ಬೀದರ ಜಿಲ್ಲೆಯಲ್ಲಿ ಸೋಯಾ ಹಾಲು ಹಾಗೂ ಸೋಯಾ ಗಿಣ್ಣದ, ತೋಫು ಉತ್ಪನ್ನಗಳ ಮೌಲ್ಯವರ್ಧಿಸಬಲ್ಲ ಸಂಸ್ಕರಣಾ ಹಾಗೂ ರೈತ ತರಬೇತಿ ಕೇಂದ್ರ, ಕಲಬುರಗಿ ಜಿಲ್ಲೆಯಲ್ಲಿ, ಜೋಳದ ಹಿಟ್ಟು ಹಾಗೂ ಜೋಳದ ಫ್ಲೇಕ್ ತಯಾರಿಸುವ ಕೇಂದ್ರ, ಯಾದಗಿರಿ ಜಿಲ್ಲೆಯಲ್ಲಿ ಶೇಂಗಾ ಎಣ್ಣೆ ಹಾಗೂ ಶೇಂಗಾ ಬೆಣ್ಣೆ ತಯಾರಿಕಾ ಘಟಕ, ಬಳ್ಳಾರಿಯಲ್ಲಿ ಖಾರದಪುಡಿ ಹಾಗೂ ಮೆಣಸಿನ ಚಕ್ಕೆಗಳನ್ನು ಸಂಸ್ಕರಿಸುವ ಘಟಕ, ಕೊಪ್ಪಳ ಜಿಲ್ಲೆಯಲ್ಲಿ ಮಾವಿನಕಾಯಿ ಹಾಗೂ ಪಪ್ಪಾಯ ಹಣ್ಣು ಸಂಸ್ಕರಣೆ ಘಟಕ, ವಿಜಯನಗರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ, ತೊಗರಿ ಮತ್ತು ಕಡಲೆ ಬೆಳೆಗಳ, ಸಂಸ್ಕರಣಾ ಘಟಕ ಹಾಗೂ ರೈತ ತರಬೇತಿ ಕೇಂದ್ರಗಳನ್ನು, ಸಂಸದರ ಪ್ರಾದೇಶಿಕ ಅಭಿವೃದ್ಧಿ ಯೋಜನೆ ನಿಧಿ ಅಡಿ, ಸ್ಥಾಪಿಸಲಾಗಿದೆ ಎಂದು, ನಿರ್ಮಲಾ ಸೀತಾರಾಮನ್ ಹೇಳಿದರು.

<><><>

ನಿರ್ಮಲಾ ಸೀತಾರಾಮನ್ ಧ್ವನಿ 60 ಸೆಕೆಂದುಗಳು

<><><>

ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ನಾಲ್ಕು ದಿನಗಳ, ರಾಜ್ಯ ಪ್ರವಾಸವನ್ನು, ಇಂದಿಗೆ ಪೂರ್ಣಗೊಳಿಸಲಿದ್ದಾರೆ. ಇಂದು ಬೆಳಗ್ಗೆ 10.30ಕ್ಕೆ, ವಿಜಯನಗರ ಜಿಲ್ಲೆ, ಕೂಡ್ಲಗಿ ತಾಲೂಕು, ಕಸಾಪುರ ಗ್ರಾಮದಲ್ಲಿ, ಸಂಸದರ ಪ್ರಾದೇಶಿಕ ಅಭಿವೃದ್ಧಿ ನಿಧಿ ಯೋಜನೆ ಅಡಿ, ರೈತರ ತರಬೇತಿ ಕೇಂದ್ರ ಹಾಗೂ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣಾ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಬಳಿಕ ರಸ್ತೆ ಮೂಲಕ, ಬೆಂಗಳೂರು ವಿಮಾನ ನಿಲ್ದಾಣ ತಲುಪಿ, ಸಂಜೆ 7.30ಕ್ಕೆ ಹೊಸದಿಲ್ಲಿಗೆ ಪ್ರಯಾಣ ಬೆಳೆಸಲಿದ್ದಾರೆ.

<><><>

ರಾಜ್ಯದಲ್ಲಿ ಪ್ರಸ್ತುತ, ಒಟ್ಟು 11 ಸಾವಿರದ 800 ಕೋಟಿ ರೂಪಾಯಿ ಹೂಡಿಕೆಯ, 9 ಮಹತ್ವದ ರೇಲ್ವೆ ಯೋಜನೆಗಳು, ಪ್ರಗತಿಯಲ್ಲಿವೆ ಎಂದು, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ತುಮಕೂರಿನ, ತಿಪ್ಪರಾಜನಹಳ್ಳಿ ಹಾಗೂ ಊರುಕೆರೆ ಗ್ರಾಮದ, ರೇಲ್ವೆ ನಿಲ್ದಾಣಗಳ, ಕಾಮಗಾರಿ ಪರಿಶೀಲಿಸಿ, ಮಾತನಾಡಿದರು. 47 ಕೋಟಿ ರೂಪಾಯಿ ವೆಚ್ಚದ, 31 ರೇಲ್ವೆ ಯೋಜನೆಗಳು ಹಾಗೂ ರಾಜ್ಯದಲ್ಲಿ ಸಾವಿರದ 600 ಕಿಲೋ ಮೀಟರ್‌ಗೂ ಉದ್ದದ, ರೇಲ್ವೆ ಮಾರ್ಗ ನಿರ್ಮಾಣಗೊಂಡಿದೆ ಎಂದರು.

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(30 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

'ಜೈವಿಕ ತಂತ್ರಜ್ಞಾನ ಕೇವಲ ವಿಜ್ಞಾನವಲ್ಲ; ಅದು ಅನ್ವೇಷಣೆಗಾಗಿ ಕಾಯ್ದಿರುವ, ವ್ಯಾಪಾರದ ಹೊಸ ಗಡಿ!' ಎಂಬ ಧ್ಯೇಯದೊಂದಿಗೆ, ಬೆಳಗಾವಿಯ ಕೆ.ಎಲ್.ಇ. ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯದಲ್ಲಿ, ಪಿ.ಎಂ.ಇ.ಜಿ.ಪಿ. ಹಾಗೂ ಎಂ.ಎಸ್.ಎಂ.ಇ. ಸ್ಟಾರ್ಟ್‌ಅಪ್ ಇನಿಶೀಯೇಟಿವ್ ಕಾರ್ಯಾಗಾರ, ಜರುಗಿತು. ಬೆಂಗಳೂರಿನ ಡೆಕ್ಟೋಸ್ ಟೆಕ್ನಾಲಜಿಸ್ ಪ್ರೈವೆಟ್ ಲಿಮಿಟೆಡ್, ವ್ಯವಸ್ಥಾಪಕ ನಿರ್ದೇಶಕ, ಜಿ.ಅರವಿಂದ ಕಾರ್ಯಾಗಾರ ಉದ್ಘಾಟಿಸಿ, ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ ಅಡಿ, 'ಸ್ಟೆಪ್' ಹಾಗೂ 'ಬೈರ್ಯಾಕ್' ಯೋಜನೆಗಳ ಕುರಿತು, ಇನ್‌ಕ್ಯೂಬೇಶನ್ ಕೇಂದ್ರಗಳ ಮೂಲಕ, ಯುವ ಜನತೆಗಾಗಿ ಉದ್ಯೋಗ ಸೃಷ್ಟಿಸುವ ಸಾಧ್ಯತೆಗಳ ಬಗ್ಗೆ, ಮಾಹಿತಿ ನೀಡಿದರು.

<><><>

ಪಶ್ಚಿಮ ಘಟ್ಟದ ತಪ್ಪಲಿನ, ಮಡಿಕೇರಿ ಜಿಲ್ಲೆಯ, ಕಾವೇರಿ ಉಗಮ ಸ್ಥಾನ, ಬ್ರಹ್ಮಗಿರಿ ವ್ಯಾಪ್ತಿಯ ತಲ ಕಾವೇರಿಯಲ್ಲಿ, ಇಂದು ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ, ಮಕರ ಲಗ್ನದ ಶುಭ ಮುಹೂರ್ತದಲ್ಲಿ, ತೀರ್ಥೋದ್ಭವ'ವಾಗಲಿದೆ. ಕಾವೇರಿ ಮತ್ತು ಭಗಂಡ ಕ್ಷೇತ್ರದಲ್ಲಿ, ಸ್ವಚ್ಛತಾ ಕಾರ್ಯಗಳು ಹಾಗೂ ಅಂತಿಮ ಸಿದ್ಧತೆಗಳು ಪೂರ್ಣಗೊಂಡಿವೆ. ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾಹಿತಿ ನೀಡಿ, ಕಾವೇರಿ ನೀರಾವರಿ ನಿಗಮ ನಿಯಮಿತದ ವತಿಯಿಂದ, 2 ಕೋಟಿ ರೂಪಾಯಿ ಅನುದಾನವನ್ನು, ಭಕ್ತಾದಿಗಳಿಗೆ ಮೂಲ ಸೌಕರ್ಯ ಕಲ್ಪಿಸಲು, ಖರ್ಚಿಸಲಾಗಿದೆ. ಭಕ್ತಾದಿಗಳ ಅನುಕೂಲಕ್ಕಾಗಿ, ಕೆ.ಎಸ್.ಆರ್.ಟಿ.ಸಿ. ಉಚಿತ 25 ಬಸ್‌ಗಳನ್ನು ವ್ಯವಸ್ಥೆ ಮಾಡಿದೆ. ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ ಎಂದರು.

<><><>

ಕೇಂದ್ರ ಸರಕು ಮತ್ತು ಸೇವಾ ತೆರಿಗೆ, 56ನೇ ಸಭೆ ಶಿಫಾರಸಿನಂತೆ, 2ನೇ ಆವೃತ್ತಿಯ ಪರಿಷ್ಕರಣೆ ಬಳಿಕ, ಕೃಷಿ ಯಂತ್ರೋಪಕರಣಗಳ ಮೇಲೆ ವಿಧಿಸಲಾಗಿದ್ದ, ಶೇಕಡ 12 ಹಾಗೂ ಶೇಕಡ 18 ರಷ್ಟಿದ್ದ ಜಿ.ಎಸ್.ಟಿ. ಕರ, ಶೇಕಡ 5ಕ್ಕೆ ಇಳಿಕೆಯಾಗಿದೆ. ಕೋಲಾರ ಜಿಲ್ಲೆಯ ರೈತ ಅಬ್ಬಣಿ ಶಿವಪ್ಪ, ಕೃಷಿಗಾಗಿ ಟ್ರಾಕ್ಟರ್ ಹಾಗೂ ಯಂತ್ರೋಪಕರಣ ಖರೀದಿಸಿದ್ದು, ಜಿ.ಎಸ್.ಟಿ. ಕರ ದರದ ಇಳಿಕೆಯಿಂದ, ತಮಗೆ ಸಾವಿರಾರು ರೂಪಾಯಿ ಉಳಿತಾಯವಾಗಿದೆ ಎಂದು, ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ರೈತ ಅಬ್ಬಣಿ ಶಿವಪ್ಪ ಧ್ವನಿ 28 ಸೆಕೆಂದುಗಳು

<><><>

ನಿಧನ ವಾರ್ತೆ

<><><>

ಧಾರವಾಡ ಹಾಗೂ ವಿಜಯನಗರ ಜಿಲ್ಲೆ, ಹೊಸಪೇಟೆಯ, ಆಕಾಶವಾಣಿ ಹಾಗೂ ದೂರದರ್ಶನ ಪ್ರಸರಣ ಕೇಂದ್ರದಲ್ಲಿ, ಚಾಲಕರಾಗಿ, 30ಕ್ಕೂ ಹೆಚ್ಚು ವರ್ಷಗಳ ಕಾಲ, ಸೇವೆ ಸಲ್ಲಿಸಿ ನಿವೃತ್ತರಾಗಿದ್ದ, ಸಿ.ಬಸವರಾಜ, ನಿನ್ನೆ ಹೊಸಪೇಟೆಯಲ್ಲಿ, ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಬೆಳಗ್ಗೆ 11 ಗಂಟೆಗೆ, ಹೊಸಪೇಟೆಯಲ್ಲಿ ಜರುಗಲಿದೆ. ಆಕಾಶವಾಣಿ ಹಾಗೂ ದೂರದರ್ಶನದ ಅಧಿಕಾರಿ ವರ್ಗ, ಸಂತಾಪ ವ್ಯಕ್ತಪಡಿಸಿದೆ.

<><><>

ಶಾಲಾ ಶಿಕ್ಷಣ ಇಲಾಖೆ, ಆಯೋಜಿಸಿದ್ದ, ಅಂತರ್ ಪದವಿ ಪೂರ್ವಮಹಾವಿದ್ಯಾಲಯಗಳ, ಜಿಲ್ಲಾ ಮಟ್ಟದ ಒಳಾಂಗಣ ಕ್ರೀಡೆ, ಚೆಸ್ ಸ್ಪರ್ಧೆಯಲ್ಲಿ,ವಿಜಯನಗರ ಜಿಲ್ಲೆ, ಹೊಸಪೇಟೆಯ, ನ್ಯಾ 'ನಲ್ ಕಾಲೇಜಿನ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿ ಎಂ.ಕೆ. ಸಂಜನಾ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಸಂಜನಾ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಚೆಸ್‌ಪಟು ಸಂಜನಾ ಧ್ವನಿ 20 ಸೆಕೆಂದುಗಳು

<><><>

'ಸ್ವಚ್ಛ ಭಾರತ ಅಭಿಯಾನ' ವಿಶೇಷ ಆಂದೋಲನ, 5.ಓ ಅಡಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣ ಹಾಗೂ ವಿಜಯನಗರ ಜಿಲ್ಲೆ, ಹೊಸಪೇಟೆಯ ರೈಲು ನಿಲ್ದಾಣದಲ್ಲಿ, ನೈಋತ್ಯ ರೇಲ್ವೆ ಉಪ ವಿಭಾಗೀಯ ಕಚೇರಿ, 'ಸ್ವಚ್ಛತಾ ಹೀ ಸೇವಾ ಅಭಿಯಾನ' ಕೈಗೊಂಡಿತು.

<><><>

'ಹೃದಯ ಅನಾರೋಗ್ಯದ ತುರ್ತು ಸಂದರ್ಭದಲ್ಲಿ, ಪ್ರತಿ ಸೆಕೆಂದೂ ಅಮೂಲ್ಯ', ಎಂಬ ಧ್ಯೇಯದೊಂದಿಗೆ, 'ಕಾರ್ಡಿಯೋ ಪಲ್ಮನರಿ ರಿಸಸ್ಸಿಟೇಶನ – ಸಿ.ಪಿ.ಆರ್' ಹ್ಯಾಂಡ್ಸ್ ಆನ್, ಜಾಗೃತಿ ಸಪ್ತಾಹ, ಇಂದು ಮುಕ್ತಾಯಗೊಳ್ಳಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- 12 ಲಕ್ಷದ 82 ಸಾವಿರ ಹೆಕ್ಟರ್ ಬೆಳೆ, ಅತಿ ವೃಷ್ಟಿ ಹಾಗೂ ನೆರೆಯಿಂದ, ಹಾನಿ; ರಾಜ್ಯದಿಂದ, ರೈತರಿಗೆ ಹೆಚ್ಚುವರಿ ಪರಿಹಾರ.
- ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ, 'ಥ್ರೀ ಪಿ' ಮಾದರಿಯಲ್ಲಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಕೇಂದ್ರದಿಂದ, ಕ್ರಮ.
- ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ; 'ಸ್ಟೆಪ್' ಹಾಗೂ 'ಬೈರ್ಯಾಕ್' ಮಾಹಿತಿ, ಕಾರ್ಯಾಗಾರ.
- ಕೊಡಗಿನ ಬ್ರಹ್ಮಗಿರಿಯ, ತಲ ಕಾವೇರಿಯಲ್ಲಿ ಇಂದು, ತೀರ್ಥೋದ್ಭವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>